**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 235/2023**

**ಸಾಕ್ಷಿಯನ್ನು ದಿಃ 24-02-2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ. SN ವಕೀಲರಿಂದಃ**

ಈಗ ನಾನು ಓದು ಮುಗಿಸಿದ್ದೇನೆ. ಈ ಹಿಂದೆ ಸಾಕ್ಷಿ ಹೇಳಿರುವುದು ನೆನಪಿದೆ. ದಿಃ 31.01.2023 ರಂದು ಘಟನೆ ನಡೆದಿದೆ. ನಾನು ಪ್ರತಿ ದಿನ ರಾತ್ರಿ ಊಟ ಮುಗಿಸಿ ವಾಕಿಂಗ್ ಹೋಗುತ್ತೇನೆ. ನಾನು ಮತ್ತು ನನ್ನ ಅಕ್ಕರಾತ್ರಿ 10.30ರ ತನಕ ವಾಕಿಂಗ್ ಮಾಡುತ್ತೇನೆ .ಆ ದಿನ ನಾನು ಒಬ್ಬನೇ ವಾಕಿಂಗ್ ಹೋಗಿದ್ದೆ. ನಾನು ಮನೆಯಿಂದ ಹೊರಗೆ ಬರುವಾಗ 10 ಗಂಟೆಯಾಗಿತ್ತು. ಅಲ್ಲಿ ಬೀದಿ ದೀಪದ ಬೆಳಕು ಇದೆ. ಸದರಿ ಬೆಳಕಿನಲ್ಲಿ ಯಾರಾದರೂ ಓಡಾಡಿದರೆ ಮತ್ತು ವಾಹನ ಬಂದರೆ ಕಾಣುತ್ತದೆ. ವಾಕಿಂಗ್ ಹೋಗುವಾಗ ಮೊಬೈಲ್ ಜೊತೆಗೆ ತೆಗೆದುಕೊಂಡು ಹೋಗುತ್ತೇನೆ. ನನಗೆ ಇಯರ್ ಫೋನ್ ಹಾಕಿಕೊಳ್ಳುವ ಅಬ್ಯಾಸ ಇದೆ ಎಂದರೆ ಇಲ್ಲ. ಆ ದಿನ ನಾನು ಮೊಬೈಲ್ ನಲ್ಲಿ ಮಾತನಾಡಿಕೊಂಡು ರಸ್ತೆಯಮಧ್ಯದಲ್ಲಿ ಹೋಗುತ್ತಿದ್ದಾಗ ದ್ವಿಚಕ್ರ ವಾಹನದಲ್ಲಿ ಬಂದ ಆರೋಪಿಯು ನನ್ನನ್ನು ರಸ್ತೆಯ ಬದಿಗೆ ಹೋಗುವಂತೆ ಹೇಳಿದ್ದು ನಾನು ಎಲ್ಲರನ್ನು ಕರೆಸಿ ಆರೋಪಿಗೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಗೇಟ್ ಹತ್ತಿರ ಬಂದಿದ್ದೆ. ರಸ್ತೆಗೆ ಬಂದಿರಲಿಲ್ಲ. ನಾನು ರಸ್ತೆಗೆ ಬರದೇ ಇದ್ದ ಕಾರಣ ಆರೋಪಿ ವಾಹನವನ್ನು ವೇಗವಾಗಿ ಚಲಾಯಿಸಿ ನನಗೆ ಗುದ್ದಿಸುವ ಪ್ರಯತ್ನ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಗುದ್ದಿಸುವಂತೆ ಬಂದು ವಾಹನವನ್ನು ತಿರುಗಿಸಿದರು. ಒಬ್ಬ ವ್ಯಕ್ತಿ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದರೆ ಏಕಾಏಕಿ ವಾಹವನ್ನು ನಿಲ್ಲಿಸಲು ಆಗುವುದಿಲ್ಲ ಎಂದರೆ ಆರೋಪಿ ನಮ್ಮ ಮನೆಯ ಗೇಟ್ ಹತ್ತಿರ ಬಂದು ಬಾಗಿಲಿನವರೆಗೆ ಹೋದರು. ಮನೆಯ ಬಾಗಿಲಿನ ಮುಂಭಾಗ ಕಾಂಪೌಂಡ್ ಇದೆ. ಗೇಟ್ ಬಾಗಿಲಿನಿಂದ ಸ್ವಲ್ಪ ದೂರಕ್ಕೆ ಇದೆ.

ಮೊದಲು ನನ್ನ ಬಳಿ ಚಾಸಾ-1 ಮತ್ತು 2 ರವರು ಬಂದರು. ಚಾಸಾ-1 ಮತ್ತು 2 ರವರು ಹೊರಗೆ ಬಂದಾಗ ಆರೋಪಿ ಬೈಕಿನ ಹತ್ತಿರ ಸುಮ್ಮನೆ ನಿಂತಿದ್ದರು ಎಂದರೆ ಸರಿಯಲ್ಲ. ಅವರು ನಿಂತಿದ್ದಾಗ ನಾನೇ ಅವರ ಮೇಲೆ ಗಲಾಟೆ ಮಾಡಿದ್ದೇನೆ ಎಂದರೆ

ಸರಿಯಲ್ಲ. ಆರೋಪಿ ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ತಾಯಿ ಹಳದಿ ಬಣ್ಣದ ಚೂಡಿದಾರ್ ಧರಿಸಿದ್ದರು. ನನ್ನ ಅಜ್ಜಿ ನೇರಳೇ ಬಣ್ಣದ ನೈಟಿ ಧರಿಸಿದ್ದರು. ಯಾವುದಾದರೂ ಗಲಾಟೆ ನಡೆದಾಗ ಅಕ್ಕ-ಪಕ್ಕದವರು ಬಂದು ಗುಂಪು ಸೇರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಅಂದಾಜು ಎಷ್ಟು ಜನ ಸೇರಿದ್ದರು ಎಂದರೆ ಗಲಾಟೆಯಲ್ಲಿ ಗೊತ್ತಾಗಲಿಲ್ಲ. ಆರೋಪಿ ಚಾಸಾ-1, 2 ಮತ್ತು 4 ರವರ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ವೆನ್ನಿ ಥಾಮಸ್ ನನಗೆ ಮಾವನಾಗಬೇಕು. ಚಾಸಾ-5 ನನ್ನ ತಾಯಿಯ ಸೋದರ ಸಂಬಂಧಿ. ಗಲಾಟೆಯಾಗುವಾಗ ಅವರು ಅಲ್ಲಿಯೇ ಇದ್ದರುಎಂದರೆ ಚಾಸಾ-5 ಬಿಡಿಸಲು ಬಂದಿದ್ದರು. ವೆನ್ನಿ ಥಾಮಸ್ ಇರಲಿಲ್ಲ. ವೆನ್ನಿ ಥಾಮಸ್ ಸ್ಥಳದಲ್ಲಿ ಇದ್ದರೂ ಕೂಡ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಚಾಸಾ-1, 2 ಮತ್ತು 4 ರವರು ಹಾಗೂ ಇತರೆ ಸಂಬಂಧಿಕರು ಹೋಗಿದ್ದರು. ಯಾರ್ಯಾರು ಚಿಕಿತ್ಸೆ ಪಡೆದುಕೊಂಡರು ಎಂದು ಗೊತ್ತಿಲ್ಲ. ನಾನು ಹೇಳಿದಂತಹ ಯಾವುದೇ ಗಲಾಟೆ ಆಗಿಲ್ಲ ಮತ್ತು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-3 ಸಾಮಾನ್ಯವಾಗಿ ಎಲ್ಲರೂ ಬರೆಯಲು ಉಪಯೋಗಿಸುವ ಪೆನ್ನು ಎಂದರೆ ಸರಿ. ಮು.ಮಾ-3ರಂತಹ ಪೆನ್ನನ್ನು ನಾನು ಸಹ ಬರೆಯಲು ಉಪಯೋಗಿಸುತ್ತೇನೆ ಎಂದರೆ ಸರಿ. ಮು.ಮಾ-3ರಂತಹ ಪೆನ್ನಿನಿಂದ ಗಾಯ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅದನ್ನು ಆನ್ ಮಾಡಿ ಹೊಡೆದಿದ್ದಾರೆ. ಆನ್ ಮಾಡಿದರು ಸಹ ಪೆನ್ನು ಚೂಪಾಗಿಲ್ಲದೇ ಇರುವ ಕಾರಣ ಗಾಯ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮು.ಮಾ-3ರ ಪೆನ್ನು ನನ್ನದು ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಮುಮಾ-3 ನ್ನು ಪೋಲಿಸರ ಮುಂದೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಚಾಸಾ-1, 2, 4 ಮತ್ತು ಮಾವಂದಿರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿ ಆರೋಪಿಗೆ ಮಾರಾಣಾಂತಿಕ ಹಲ್ಲೆ ಮಾಡಿ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಗಲಾಟೆಯಾಗಿದೆ ಎನ್ನುವ ದಿನ ಆರೋಪಿ ನಮ್ಮ ವಿರುದ್ಧ ದೂರನ್ನು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಿಡಿ-1 ರಲ್ಲಿರುವ ವಿಳಾಸ ನನ್ನದಾಗಿದೆ. ಆರೋಪಿಗೆ ನಾವು ಹಲ್ಲೆ ಮಾಡಿ ಅವರು

ನಮ್ಮ ವಿರುದ್ದ ದೂರು ಕೊಟ್ಟ ಕಾರಣ ನಾವು ಸುಳ್ಳು ಪ್ರತಿ ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಸೇರಿದ್ದ ಪೆನ್ನನ್ನು ಪೋಲಿಸರ ಮುಂದೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ನಮ್ಮ ಮೇಲೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.